## 3. ಪಾಕ್–ಚೀನಾ ನಡುವೆ ಮೂರು ವರ್ಷದ ರಹಸ್ಯ ಒಪ್ಪಂದ

ಕೊರೋನಾ ಮಹಾಮಾರಿಯ ಜನಕ ಎಂಬ ಹಣೆಪಟ್ಟಿ ಅಂಟಿಸಿಕೊಂಡು ವಿಶ್ವರಾಷ್ಟ್ರಗಳ ಆಕ್ರೋಶಕ್ಕೆ ಗುರಿಯಾಗಿರುವ ಚೀನಾ ಇದೀಗ ಮನುಕುಲಕ್ಕೆ ಮಾರಕವಾದ ಮತ್ತಷ್ಟು ಕ್ರಮಗಳಿಗೆ ಮುಂದಾಗಿರುವ ಮಾಹಿತಿ ಬಹಿರಂಗವಾಗಿದೆ. ಭಾರತ ಹಾಗೂ ಕೆಲ ಪಾಶ್ವಿಮಾತ್ಯ ರಾಷ್ಟ್ರಗಳನ್ನು ಗುರಿಯಾಗಿಸಿಕೊಂಡು ಜೈವಿಕ ಯುದ್ಧದ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ತನ್ನ ಮಿತ್ರರಾಷ್ಟ್ರ ಪಾಕಿಸ್ತಾನದ ಜೊತೆ ಚೀನಾ ಕೈಜೋಡಿಸಿದೆ.

ಪೂರ್ವ ಲಡಾಖ್‌ನಲ್ಲಿ ಕ್ಯಾತೆ ತೆಗೆದು ಗಡಿ ಬಿಕ್ಕಟ್ಟಿಗೆ ಕಾರಣವಾಗಿದ್ದ ಚೀನಾವನ್ನು ಭಾರತ ಹಿಮ್ಮೆಟ್ಟಿಸಿದ ಬೆನ್ನಲ್ಲೇ ಬೆಳಕಿಗೆ ಬಂದಿರುವ ಈ ವಿದ್ಯಮಾನ ಆತಂಕ ಹೆಚ್ಚಿಸಿದೆ. ಮೂರು ವರ್ಷಗಳ ಚೀನಾ–ಪಾಕ್ ಒಪ್ಪಂದದಲ್ಲಿ ಹಲವು ಸಂಶೋಧನೆಗಳು ಸೇರಿವೆ. ಮಾರಣಾಂತಿಕ ಅಂಥ್ರಾಕ್ಸ್ ಮಾದರಿಯ ವೈರಸ್ ಅಭಿವೃದ್ಧಿ ಕೂಡ ಜೈವಿಕ ಯುದ್ಧದ ಭಾಗವಾಗಿದೆ ಎಂದು ಅನೇಕ ಗುಪ್ತಚರ ಮೂಲಗಳನ್ನು ಉಲ್ಲೇಖಿಸಿ ಆನ್‌ಲೈನ್ ಸುದ್ದಿ ಸಂಸ್ಥೆ 'ಕ್ಲಾಕ್ಸನ್' ವರದಿ ಮಾಡಿದೆ.

ಪಾಕ್‌ನ ರಕ್ಷಣಾ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ (ಡಿಇಎಸ್‌ಟಿಓ) ಜೊತೆ ಸೇರಿ ಜೈವಿಕ ಅಸ್ತ್ರಗಳ ಬಗ್ಗೆ ಚೀನಾ ರಹಸ್ಯ ಅಧ್ಯಯನ ನಡೆಸುತ್ತಿದೆ. ಆದರೆ ಇದಕ್ಕೆ 'ಉದಯೋನ್ಮುಖ ಸಾಂಕ್ರಮಿಕ ರೋಗ ಮತ್ತು ಅದರ ಪ್ರಸರಣ ನಿಯಂತ್ರಣದ ಜೈವಿಕ ಅಧ್ಯಯನ' ಎಂಬ ಶೀರ್ಷಿಕೆಯನ್ನು ನೀಡಿದೆ. ಚೀನಾವೇ ಈ ಅಧ್ಯಯನದ ಸಂಪೂರ್ಣ ಆರ್ಥಿಕ ಅನುದಾನ ಭರಿಸಲಿದೆ ಎಂದು ವರದಿ ತಿಳಿಸಿದೆ.

ಈ ರಹಸ್ಯ ಯೋಜನೆಯನ್ನು ಪಾಕ್‌ನ ಆರೋಗ್ಯ ಇಲಾಖೆ ಮತ್ತು ವಿಶ್ವವಿದ್ಯಾಲಯಗಳ ಮೇಲ್ವಿಚಾರಣೆಯಿಂದ ಹೊರಗಿರಿಸಲಾಗಿದ್ದು, ಕೆಲವೇ ಮಂದಿಗೆ ಈ ಸಂಶೋಧನೆಯ ಉದ್ದೇಶ ಗೊತ್ತಿದೆ ಎನ್ನಲಾಗಿದೆ.

ಆಧಾರ:ವಿಜಯವಾಣಿ, ದಿನಾಂಕ:25.07.2020